310 (642) ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. (ಕೊಪ್ಪಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯದಲ್ಲಿ ಎಷ್ಟು ಕಿಮೀ. ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ;

ಆ) 2006–07ನೇ ಸಾಲಿನಲ್ಲಿ ಯಾವ ಯಾವ ರಾಜ್ಯ ಹೆದ್ದಾರಿ/ಜಿಲ್ಲಾ ಪ್ರಮುಖ ರಸ್ತೆಗಳ ಎಷ್ಟೆಷ್ಟು ಕಿಮೀ. ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ;

ಇ) ಇವುಗಳನ್ನು ಆಯ್ಕೆ ಮಾಡುವಾಗ್ಗೆ ಡಾ: ನಂಜುಂಡಪ್ಪನವರ ವರದಿಗೆ ಮಾನ್ಯತೆ ನೀಡಲಾಗಿದೆಯೇ;

ಈ) ಹಾಗಿದ್ದಲ್ಲಿ, ಮಾನ್ಯತೆ ಪಡೆದ ಹಿಂದುಳಿದ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಎಷ್ಟು ಕಿಮೀ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ ಹಾಗು ಇದಕ್ಕಾಗಿ ಮೀಸಲಿಟ್ಟಿರುವ ಅನುದಾನವೆಷ್ಟು (ವಿವರಗಳನ್ನು ಒದಗಿಸುವುದು)?

ಶ್ರೀ ಹೆಚ್.ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯದಲ್ಲಿ ಒಟ್ಟು 817.51 ಕಿಮೀ ರಾಜ್ಯ ಹೆದ್ದಾರಿಗಳನ್ನು ಮಾತ್ರ ರೂ. 1023.42 ಕೋಟಿಗಳ ಮೊತ್ತದಲ್ಲಿ ತೆಗೆದುಕೊಂಡು ಅಭಿವೃದ್ಧಿಗೊಳಿಸಲಾಗುತ್ತಿದೆ.

ಆ) 2006–07ರಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯದಲ್ಲಿ 257 ಕಿಮೀ. ರಾಜ್ಯ ಹೆದ್ದಾರಿಗಳನ್ನು ರೂ. 428.48 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಅವುಗಳ ವಿವರ ಕೆಳಗಿನಂತಿದೆ.

1) ಮೈಸೂರು–ಬಂಟ್ವಾಳ ರಸ್ತೆ ಪ್ಯಾಕೇಜ್–ಬಿ (ಕುಶಾಲ ನಗರದಿಂದ–ಸಂಪಾಜೆವರೆಗೆ) 65 ಕಿಮೀ. ರಸ್ತೆಯನ್ನು ರೂ.94.25 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಗೊಳಿಸುವುದು.

2) ಆಂಧ್ರಪ್ರದೇಶ ಗಡಿಯಿಂದ–ಶಹಪುರ ರಸ್ತೆ (ಯಾದಗೀರ್ ನಿಂದ–ಶಹಪುರ ವರೆಗೆ 40 ಕಿಮೀ ರಸ್ತೆಯನ್ನು ರೂ. 56.23 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಗೊಳಿಸುವುದು.

3) ಧಾರವಾಡ–ಅಳ್ನಾವರ–ರಾಮನಗರ ರಸ್ತೆಯ 60 ಕಿಮೀ ಉದ್ದದ ರಸ್ತೆಯನ್ನು ರೂ. 172 ಕೋಟಿಗಳ ಅಂದಾಜು ಮೊತ್ತದಲ್ಲಿ ಬಿ.ಓ.ಟಿ ಆಧಾರದ ಮೇಲೆ ತೆಗೆದುಕೊಳ್ಳಲು ಟೆಂಡರ್ ಕರೆಯಲಾಗಿದೆ.

4) ಬೆಳಗಾಂ–ಚೋರ್ಲಾ (ವಯಾ ಪೀರನವಾಡಿ ಜಾಂಬೋಟಿ) ರಸ್ತೆಯ 50 ಕಿಮೀ. ಉದ್ದವನ್ನು ರೂ. 65 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸುವುದು.

5) ಚನ್ನರಾಯಪಟ್ಟಣ–ಹೊಳೆನರಸೀಪುರ–ಅರಕಲಗೂಡು 42 ಕಿಮೀ ಉದ್ದದ ರಸ್ತೆಯನ್ನು 41 ಕೋಟಿಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸುವುದು.

ಇ) ಹೌದು

ಈ) ಮಾನ್ಯತೆ ಪಡೆದ ಹಿಂದುಳಿದ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ 182 ಕಿಮೀ. ಗಳನ್ನು 145.12 ಕೋಟಿ ರೂ.ಗಳ ಮೊತ್ತದಲ್ಲಿ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು 237 ಕಿಮೀ. ರಾಜ್ಯ ಹೆದ್ದಾರಿಗಳನ್ನು 282.88 ಕೋಟಿ ರೂ.ಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ವಿವರಗಳನ್ನು ಲಗತ್ತಿಸಿದೆ.

311 (759) ಶ್ರೀ ಬಸವರಾಜ ರಾಯರೆಡ್ಡಿ. (ಯಲ್‌ಬುರ್ಗ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000–01ನೇ ಸಾಲಿನಿಂದ 2006–07ನೇ ಸಾಲಿನವರೆಗೆ ರಾಜ್ಯದಲ್ಲಿನ ಲೋಕೋಪಯೋಗಿ ಇಲಾಖೆಗೆ ರಸ್ತೆ ಮತ್ತು ಸೇತುವೆ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ, ಕೇಂದ್ರ ಸರ್ಕಾರದಿಂದ, ವಿಶ್ವಬ್ಯಾಂಕ್‌ನಿಂದ, ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಹಾಗೂ ಇತರೆ ಬಾಹ್ಯ ಸಂಸ್ಥೆಗಳಿಂದ ಎಷ್ಟೆಷ್ಟು ಸಾಲವನ್ನು ಪಡೆಯಲಾಗಿದೆ;